ಪ್ರೊ.ಎಂ.ಡಿ.ನಂಜುಂಡಸ್ವಾಮಿ :- ಮಾನ್ಯ ಸಭಾಧ್ಯಕ್ಷರೇ, ಆದಕ್ಕೇನು ಕಷ್ಟ ಅಂತ ನನಗೇನೂ ಕಾಣಿಸುತ್ತಿಲ್ಲ. ಕಷ್ಟ ಆಗಬಾರದು. ಏಕೆಂದರೆ ಈಗಾಗಲೇ ಈ ಸದನದಲ್ಲಿ ನಾವು ಮಧ್ಯಂತರ ಆದೇಶವನ್ನು ನಿರಾಕರಿಸಿದ್ದೇವೆ ಎಂದು ಒಂದು ನಿರ್ಣಯ ಇದೆ. ಆದಕ್ಕೆ ಹೊಂದಿಕೊಂಡ ಹಾಗೆ ನಾವು ಈ ಮಾನಿಟರಿಂಗ್ ಕಮಿಟಿಯನ್ನು ನಿರಾಕರಿಸುತ್ತೇವೆ ಎಂದು ಹೇಳಲು ಏನೂ ಕಷ್ಟ ಆಗಬಾರದು ಇದಕ್ಕೆ. It is just a logical step, one step forward. ಆ ಕಾರಣ ಈ ಒಂದು ನಿರ್ಣಯ ಮಾಡುವುದಕ್ಕೆ ಏನೂ ಅಡ್ಡಿ ಇಲ್ಲ ಅಂತ ನನಗನಿಸುತ್ತದೆ.

ಶ್ರೀ ಎಸ್.ಎಂ. ಕೃಷ್ಣ :- ಈಗಾಗಲೇ ನಾವು ಈ ಎರಡೂ ಸದನಗಳಲ್ಲಿ ನಿರ್ಣಯಗಳನ್ನು ಮಾಡಿದ್ದೇವೆ. ಅದಕ್ಕೆ ನಾವು ಬದ್ಧರಾಗಿರುವಾಗ ಬೇರೆ ಯಾವ ಪ್ರಶ್ನೆಗಳೂ ಉದ್ಭವವಾಗುವುದಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ :-ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದರಲ್ಲಿ ಸರ್ಕಾರದ ನೀತಿ ಸ್ಪಷ್ಟವಿಲ್ಲ. ಅದೇ ಪ್ರಕಾರ ಕಾರ್ಯಕ್ರಮಗಳು ನಮಗೆ ಸ್ಪಷ್ಟವಾಗಿ ಕಾಣಿಸುತ್ತಾ ಇಲ್ಲ. ಕೇಂದ್ರ ಸರ್ಕಾರ ಇಷ್ಟೊಂದು ಮಲತಾಯಿಧೋರಣೆಯಿಂದ ಕ್ರಮ ತೆಗೆದುಕೊಳ್ಳುವಾಗ ಅದರ ವಿರುದ್ಧ ಹೋರಾಟಮಾಡುವ ಶಕ್ತಿ ಇವರಲ್ಲಿ ಇಲ್ಲ. ಕಾವೇರಿ ಬೇಸಿನ್ ಫಾರ್ಮರ್ಸ್ ಇಂಟ್ರೆಸ್ಟ್ ಪ್ರೊಟೆಕ್ಟ್ ಮಾಡುವ ಶಕ್ತಿ ಇವರಲ್ಲಿ ಇಲ್ಲ. ಇವತ್ತು ನಿಮ್ಮ ಸರ್ಕಾರಕ್ಕೆ ನಿಜವಾಗಿ ಕಾವೇರಿ ಬೇಸಿನ್ ಫಾಮರ್ಸ್ ಬಗ್ಗೆ ಮತ್ತು ಈ ರಾಜ್ಯದ ಹಿತವನ್ನು ಕಾಯ್ದುಕೊಳ್ಳುವ ಶಕ್ತಿ ಇದ್ದರೆ ತಾವು ಇವತ್ತು ಮಾನಿಟರಿಂಗ್ ಕಮಿಟಿ ಆಪಾಯಿಂಟ್ ಮಾಡಬಾರದು ಎಂದು ನಾವು ಏನು ಸಲಹೆ ಕೊಟ್ಟಿದ್ದೇವೆ ಅದಕ್ಕೆ ತಾವು ಒಪ್ಪಿಕೊಳ್ಳುತ್ತಿದ್ದಿರಿ. ಒಂದು ರೆಸಲ್ಯೂಷನ್‌ಮೂವ್ ಮಾಡುತ್ತಿದ್ದಿರಿ: ಅಷ್ಟೇ ಅಲ್ಲ ಶುಕ್ಲಾರವರ ನಡವಳಿಕೆ ಏನು ಇದೆ ಅದನ್ನೂ ಸಹ ತಾವು ಖಂಡನೆ ಮಾಡುತ್ತಿದ್ದಿರಿ. ಆ ಕೆಲಸವನ್ನು ತಾವು ಮಾಡಿಲ್ಲ; ಹಾಗಾಗಿ ತಮ್ಮ ಸರ್ಕಾರಕ್ಕೆ ಯಾವ ಸಮಸ್ಯೆಯನ್ನೂ ಸಹ ಬಗೆಹರಿಸುವ ಆಸಕ್ತಿ ಇಲ್ಲ; ಕೇವಲ ಕಚ್ಚಾಟದಿಂದ ತಾವು ಮುಖ್ಯಮಂತ್ರಿ ಆಗಬೇಕು ಎಂದು ಏನೆಲ್ಲಾ ಮಾಡುತ್ತಿದ್ದೀರೇ ಹೊರತು ಈ ಒಂದು ಸಮಸ್ಯೆ ಬಗೆಹರಿಸುವ ಚಿಂತನೆ ನಿಮಗೆ ಇಲ್ಲ; ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ಮಾಡುವ ಶಕ್ತಿ ನಿಮಗೆ ಇಲ್ಲ. ಹಾಗಾಗಿ ಅಧಿಕಾರದಲ್ಲಿರುವ ಶಕ್ತಿಯನ್ನೂ ಸಹ ತಾವು ಕಳೆದುಕೊಂಡಿದ್ದೀರಿ. ನೈತಿಕವಾಗಿ ಆಗಲಿ ಕಾಯ್ದೆಬದ್ಧವಾಗಿ ಆಗಲಿ, ಆದ್ದರಿಂದ ತಾವು ತಮ್ಮ ನೀತಿಯನ್ನು ವಿರೋಧಿಸಿ ಇವತ್ತು ವಾಕಾಟ್ ಮಾಡುತ್ತೇವೆ.

(ಈ ಸಂದರ್ಭದಲ್ಲಿ ಜನತಾ ದಳದ ಎಲ್ಲಾ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಬಗ್ಗೆ ಭಯ ಈ ಸರ್ಕಾರಕ್ಕೆ. ಎಲ್ಲಿ ನಮ್ಮನ್ನು ಕಿತ್ತು ಹಾಕಿಬಿಡುತ್ತಾರೋ ಎನ್ನುವ ಧೋರಣೆಯಿಂದ ಈ ನಾಟಕ ಮಾಡುತ್ತಿದ್ದಾರೆ. ಸರ್ಕಾರದ ಈ ಧೋರಣೆಯನ್ನು ನಾವು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಸಂದರ್ಭದಲ್ಲಿ ಮಾನ್ಯ ಬಿ.ಜೆ.ಪಿ. ಪಕ್ಷದ ಶಾಸಕರು ಸಭಾತ್ಯಾಗ ಮಾಡಿದರು) .

ಪ್ರೊ. ಎಂ.ಡಿ.ನಂಜುಂಡಸ್ವಾಮಿ: - ಸನ್ಮಾನ್ಯ ಸಭಾಧ್ಯಕ್ಷರೇ, ನನ್ನದು ಕೊನೆ ಸರದಿ. ನಾನು ಒಂದು ಮಾತು ಹೇಳಿ ನಾನು ಹೊರಹೋಗಬೇಕಾಗುತ್ತದೆ. ಏಕೆಂದರೆ ನಾನು ಈ ಸರ್ಕಾರವನ್ನು ಒಂದೇ ಒಂದು ವಿಷಯ ಕೇಳಿದೆ. ನೀರಿನ ಕಾನೂನು ಸಂಬಂಧಪಟ್ಟ ಹಾಗೆ ರೈತನ ಹಕ್ಕನ್ನು ಯಾರೋ ಮೊಟಕು